ಇದರಿಂದ ಅವರ ಟಿಆರ್‌ಪಿ ಹೆಚ್ಚುವ ಸಾಧ್ಯತೆಯಿತ್ತು; ನೂರಾರು ನೇತಾರರ ಟಿಆರ್‌ಪಿ ಗಾಂಧಿಯವರ ಕಾರಣದಿಂದಲೇ ಹೆಚ್ಚಿತ್ತು; ಇದರ ಲಾಭವನ್ನು ಅವರು ಗಾಂಧಿಯ ಹತ್ಯೆಯ ನಂತರ ಪಡೆಯುತ್ತಿದ್ದಾರೆ.

ಗಾಂಧಿಯ ಆದರ್ಶಗಳನ್ನು ಹತ್ಯೆಗೈದು ರಕ್ತ ಹರಿಸುವವರು ಸಹ ಕನ್ನಡಕವಿಲ್ಲದ ಗಾಂಧಿಯವರನ್ನು ನೋಡಿ ಕಣ್ಣೀರಿಡುತ್ತಿದ್ದರು; ಅವರ ಈ ಕಣ್ಣೀರಿಗೆ ಮೊಸಳೆಗಳು ಸಹ ನಾಚುವಂತಿತ್ತು.

ಅಕ್ಟೋಬರ್ 2ರಂದು ರಾತ್ರಿ ಕಂಪನೀ ಬಾಗ್‌ನಲ್ಲಿ ನಿಶ್ಶಬ್ದ ಕವಿದಿತ್ತು. ಅಲ್ಲಿ ಕೆಲವು ನಾಯಿಗಳನ್ನು ಹೊರತುಪಡಿಸಿ ಬೇರಾರೂ ಇರಲಿಲ್ಲ. ಅಹಿಂಸಾ ನಗರದ ಸ್ಲಮ್‌ನಲ್ಲಿ ವಾಸಿಸುವ ಓರ್ವ ಶುದ್ಧ ಗಾಂಧಿವಾದಿ ವೃದ್ಧ ಆಚಾರ್ಯರ ಜೀವನ ಸ್ವಾತಂತ್ರ್ಯದ ಹೋರಾಟದಲ್ಲಿಯೇ ಕಳೆದಿತ್ತು; ಅವರು ಕನ್ನಡಕ ಮಾಯವಾಗಿರುವ ವಿಷಯ ತಿಳಿದು ನಡುರಾತ್ರಿಯಲ್ಲೂ ಗಾಂಧಿ ದರ್ಶನ ಪಡೆಯಲು ಬಂದಿದ್ದರು.

ಆಚಾರ್ಯರು ಸ್ವಲ್ಪ ದೂರ ನಿಂತು ತಲೆಯೆತ್ತಿ ಗಾಂಧಿಯವರ ಮುಖವನ್ನು ತದೇಕಚಿತ್ತದಿಂದ ನೋಡಿದರು. ಕನ್ನಡಕವಿಲ್ಲದೆ ಗಾಂಧಿಯವರ ಕಣ್ಣುಗಳಲ್ಲಿ ಕಣ್ಣೀರಿತ್ತು, ಕಣ್ಣುಗಳಲ್ಲಿ ಉದಾಸೀನತೆಯಿತ್ತು, ಕನ್ನಡಕವಿಲ್ಲದ ಗಾಂಧಿಯವರು, ಮಹಾತ್ಮ ಗಾಂಧಿಯವರಾಗಿ ಕಾಣಿಸುತ್ತಿರಲಿಲ್ಲ. ಆಚಾರ್ಯರು ತೀಕ್ಷ್ಣ ದೃಷ್ಟಿಯಿಂದ ನೋಡಿದರು; ಗಾಂಧಿಯವರ ತುಟಿಗಳು ಒಣಗಿದ್ದವು. ಆಚಾರ್ಯರು ಕೈ ಜೋಡಿಸಿ ಸ್ವಲ್ಪ ಹೊತ್ತು ಗಾಂಧಿಯವರ ಮುಖವನ್ನೇ ನೋಡಿದರು. ಅವರ ಮನಸ್ಸಿನಲ್ಲಿ, ಗಾಂಧಿಯವರ ಕನ್ನಡಕ ಎಲ್ಲಿ ಹೋಯಿತು, ಯಾರಾದರೂ ರಾತ್ರೋರಾತ್ರಿಯಲ್ಲಿ ಅಷ್ಟು ಎತ್ತರಕ್ಕೆ ಹತ್ತಿ ಕನ್ನಡಕವನ್ನೇ ಕತ್ತರಿಸಿಕೊಂಡು ಹೋದರೇ? ಎಂಬ ಪ್ರಶ್ನೆಗಳು ಕಾಡಿದವು.

...ಆಚಾರ್ಯರು ಪ್ರತಿಮೆಗೆ ನಮಸ್ಕರಿಸಿ, ಹೊರಳಿ ಮನೆಗೆ ಹೋಗಬೇಕೆಂದಿದ್ದರು. ಆಗಲೇ ಅವರಿಗೆ ಪ್ರತಿಮೆಯಿಂದ ಧ್ವನಿ ಕೇಳಿಸಿದಂತೆ ಭಾಸವಾಯಿತು. ಅವರು ನಿಂತು ಮತ್ತೆ ಹೊರಳಿ ಗಾಂಧೀಜಿಯವರ ಕಣ್ಣುಗಳನ್ನೇ ನೋಡಿದರು. ಆಶ್ಚರ್ಯ, ಗಾಂಧಿಯವರ ಕಣ್ಣಿನ ರೆಪ್ಪೆಗಳು ತೆರೆದಿದ್ದವು, ಅವರ ತುಟಿಗಳು ಸಹ ತೆರೆದು, ಮಾತನಾಡುತ್ತಿರುವಂತೆ ತೋರಿತು.



'ಕೇಳು, ನಾನು ನಿನಗೇ ಹೇಳುತ್ತಿದ್ದೇನೆ. ನಿನ್ನ ಹಾಗೆ ನನ್ನನ್ನು ಅನುಕರಣೆ ಮಾಡುವವರು ಕೆಲವರಷ್ಟೇ ಉಳಿದಿದ್ದಾರೆ. ಕಳೆದ ಏಳು ದಶಕಗಳಿಂದ, ನನ್ನ ವಿಚಾರಗಳು ನಿತ್ಯ ಹತ್ಯೆಯಾಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಆದರೆ ನನ್ನ ಹತ್ಯೆ ಒಮ್ಮೆ ಮಾತ್ರವಾಗಿತ್ತು. ಬದಲಾಗುತ್ತಿದ್ದ ಬಿಳಿ, ಕೆಂಪು, ಕೇಸರಿ ಬಣ್ಣದ ಟೋಪಿಧಾರಿಗಳಲ್ಲಿ ಯಾರಾದರೂ ನನ್ನ ಕನಸುಗಳನ್ನು ಆರಂಭಿಸುತ್ತಾರೆ ಎಂದು ಕಾಯುತ್ತಿದ್ದೆ; ಆದರೆ ಎಲ್ಲರೂ ಒಂದೇ ತೆರನಾಗಿ ನಡೆದುಕೊಳ್ಳುತ್ತಿದ್ದಾರೆ. ನನ್ನ ಕನಸು ಕ್ರಮೇಣ ಸಾಯುತ್ತಿದೆ. ಇನ್ನು ನನ್ನಿಂದ ನೋಡಲಾಗದು, ಅದಕ್ಕೆ ನಾನೇ ನನ್ನ ಕನ್ನಡಕವನ್ನು ಕಳಚಿ ನಾಶ ಮಾಡಿದೆ.'

●